# ಅಮೃತ ಮಹೋತ್ಸವದ ಭಕ್ತಸಮ್ಮೇಳನ

ವರದಿ
ಸತ್ಯಾಗಾಲಂ ಪಾರ್ಥಸಾರಥಿ

ಅಮೃತ ಮಹೋತ್ಸವದ ಭಕ್ತಸಮ್ಮೇಳನದ ಎಲ್ಲ ಹಂತಗಳಲ್ಲೂ ಉತ್ಸಾಹದಿಂದ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದವರು ಆಶ್ರಮದ ಆತ್ಮೀಯ ಭಕ್ತರಾದ ಶ್ರೀಯುತ ಸತ್ಯಾಗಾಲಂ ಪಾರ್ಥಸಾರಥಿಯವರು. ಅವರು ಸಮ್ಮೇಳನದ ಅಧಿವೇಶನಗಳುದ್ದಕ್ಕೂ ತಾಳ್ಮೆಯಿಂದ ಕುಳಿತು ಪ್ರತಿಯೊಂದು ಸಣ್ಣ ವಿವರವನ್ನೂ ದಾಖಲಿಸಿ ತಯಾರಿಸಿದ ವಿಸ್ತೃತವಾದ ವರದಿಯಿಂದ ಸಂಗ್ರಹಿಸಲ್ಪಟ್ಟಿದೆ.

ಎಪ್ಪತ್ತೈದು ವಸಂತಗಳ ಪುಷ್ಪಸೌರಭವನ್ನು ಸುತ್ತೆಲ್ಲ ಪಸರಿಸಿ, ದುಂಬಿಗಳೋಪಾದಿಯಲ್ಲಿ ಭಕ್ತವೃಂದವನ್ನು ತನ್ನೆಡೆಗೆ ಆಕರ್ಷಿಸಿಕೊಂಡು, ಭಕ್ತಿಜ್ಞಾನವೈರಾಗ್ಯಗಳ ಭಾವ ಮಕರಂದವನ್ನುಣಿಸಿ, ಭಕ್ತಜನರ ಆಶೋತ್ತರಗಳಿಗೆ ಸ್ಪಂದಿಸುತ್ತ ಪ್ರಗತಿಪಥದಲ್ಲಿ ನಡೆದು ಬರುತ್ತಿರುವ ಮೈಸೂರು ಶ್ರೀರಾಮಕೃಷ್ಣ ಆಶ್ರಮವು ತನ್ನ ೭೫ನೇ ವರ್ಷದ ಮಹೋತ್ಸವದ ಬಹುಮುಖ್ಯ ಅಂಗವಾದ ಭಕ್ತ ಸಮ್ಮೇಳನವನ್ನು ನಡೆಸಿತು. ಸುಮಾರು ೩೫೦೦ ಭಕ್ತರು ಮತ್ತು ಸಾಧುಗಳು ಸಮಾವೇಶಗೊಂಡಿದ್ದರು.

ಇದೇ ಮೇ ಮಾಹೆಯ ೧೮ರಿಂದ ನಾಲ್ಕು ದಿನಗಳ ಪರ್ಯಂತ ನಡೆದ ಈ ಸಮಾರಂಭಕ್ಕೆ, ಆಶ್ರಮದ ದೇವಮಂದಿರದಲ್ಲಿ ಜರುಗಿದ ವೇದಪಠನ ಮತ್ತು ಭಜನೆ ಶುಭನಾಂದಿಯಾಯಿತು.

ಶ್ರೀರಾಮಕೃಷ್ಣ ವಿದ್ಯಾಶಾಲೆಯ ವಿಶಾಲವಾದ ಹೊರಾಂಗಣದಲ್ಲಿ ಸುಸಜ್ಜಿತವೂ, ನಯನಮನೋಹರವೂ ಆದ ಸಭಾಂಗಣ ರಚನೆಯಾಗಿತ್ತು. ಈ ಸಮಾರಂಭಕ್ಕೆ ಆಗಮಿಸಿದ ಪರಸ್ಥಳದ ಪ್ರತಿನಿಧಿ ಭಕ್ತರ ವಸತಿ ಸೌಕರ್ಯಕ್ಕಾಗಿ, ಆಶ್ರಮಕ್ಕೆ ಸಮೀಪದಲ್ಲಿರುವ ಹಲವು ಕಡೆ ವ್ಯವಸ್ಥೆ ಮಾಡಲಾಗಿತ್ತು. ಉಪಾಹಾರ ಹಾಗೂ ಭೋಜನದ ವ್ಯವಸ್ಥೆಯನ್ನು, ಸಭಾಂಗಣದ ಸಮೀಪವೇ ಏರ್ಪಡಿಸಿದ್ದರಿಂದ, ಸಮ್ಮೇಳನದ ಅಧಿವೇಶನಗಳನ್ನು, ನಿಶ್ಚಿತ ವೇಳೆಯಲ್ಲಿ ನಡೆಸಿಕೊಂಡು ಹೋಗಲು ಅನುವಾಯಿತು. ಪ್ರತಿನಿಧಿ ಭಕ್ತರ ಸೌಲಭ್ಯಕ್ಕಾಗಿ, ವಿಚಾರಣಾಕೇಂದ್ರ, ವೈದ್ಯಕೀಯ ಕೇಂದ್ರ, ಮಾಹಿತಿ ಕೇಂದ್ರಗಳನ್ನು ಅದೇ ಆವರಣದಲ್ಲಿ ಸಜ್ಜುಗೊಳಿಸಲಾಗಿತ್ತು. ಶ್ರೀರಾಮಕೃಷ್ಣ-ವಿವೇಕಾನಂದ-ವೇದಾಂತ ಸಾಹಿತ್ಯದ ಗ್ರಂಥ-ಪ್ರದರ್ಶನ ಮತ್ತು ಮಾರಾಟದ ಮಳಿಗೆಯನ್ನು ಸುವ್ಯವಸ್ಥಿತವಾಗಿ ಏರ್ಪಡಿಸಲಾಗಿತ್ತು. ಕರ್ನಾಟಕದಲ್ಲಿ ರಾಮಕೃಷ್ಣ ಭಾವಧಾರೆಗೆ ಸೇರಿದ ಸಂಸ್ಥೆಗಳ ಚಟುವಟಿಕೆಗಳನ್ನು ಕುರಿತಾದ ವಸ್ತು ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.



ಸನ್ಮಾನ್ಯ ರಾಜ್ಯಪಾಲೆ ಶ್ರೀಮತಿ ವಿ.ಎಸ್. ರಮಾದೇವಿಯವರು ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡುತ್ತಿರುವುದು. ಎಡದಿಂದ ಸ್ವಾಮಿ ಹರ್ಷಾನಂದಜಿ ಮತ್ತು ಸ್ವಾಮಿ ಆತ್ಮವಿದಾನಂದಜಿ.

## ಭಕ್ತಸಮ್ಮೇಳನದ ಉದ್ಘಾಟನಾ ಸಮಾರಂಭ

ಭಕ್ತಸಮ್ಮೇಳನದ ಉದ್ಘಾಟನಾ ಸಮಾರಂಭ ೧೮ರಂದು ಗುರುವಾರ ಸಂಧ್ಯೋದಯದ ಸಮಯದಲ್ಲಿ, ಆಶ್ರಮದ ಸಾಧುಗಳ ವೇದಘೋಷದೊಂದಿಗೆ ಆರಂಭವಾಯಿತು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕರ್ನಾಟಕದ ರಾಜ್ಯಪಾಲೆ, ಸನ್ಮಾನ್ಯ ಶ್ರೀಮತಿ ವಿ.ಎಸ್. ರಮಾದೇವಿಯವರು ಜ್ಯೋತಿ ಬೆಳಗಿಸುವುದರ ಮೂಲಕ ಭಕ್ತ ಸಮ್ಮೇಳನದ ಉದ್ಘಾಟನೆಯನ್ನು ನೆರವೇರಿಸಿದರು. ನಂತರ

ಆಶ್ರಮದ ಅಮೃತ ಮಹೋತ್ಸವದ ಸವಿ ನೆನಪಿಗಾಗಿ ಸಿದ್ಧಪಡಿಸಲಾದ ಸ್ಮರಣ ಸಂಚಿಕೆ 'ಅಮೃತ ವರ್ಷ'ವನ್ನು ಬಿಡುಗಡೆ ಮಾಡಿದರು. ಅನಂತರ ಮಾತನಾಡಿದ ಅವರು 'ಮೌಲ್ಯಾಧಾರಿತ ಶಿಕ್ಷಣ ಇಂದಿನ ಪರಿಸ್ಥಿತಿಯಲ್ಲಿ ಅತ್ಯಗತ್ಯ. ವಿದ್ಯಾರ್ಥಿಗಳ ವ್ಯಕ್ತಿತ್ವ ರೂಪಿಸುವ ಅಧ್ಯಾಪಕರಲ್ಲಿ ಮೊದಲು ಮೌಲ್ಯಾಧಾರಿತ ಶಿಕ್ಷಣದ ಅರಿವು ಮೂಡಿಸಬೇಕು. ಗುರು-ಶಿಷ್ಯರ ಸಂಬಂಧ ಆಧ್ಯಾತ್ಮಿಕ ಹಿನ್ನೆಲೆಯಿಂದ ಕೂಡಿರಬೇಕು. ಪ್ರಾಥಮಿಕ ಹಂತದಿಂದ-ವಿಶ್ವವಿದ್ಯಾನಿಲಯದವರೆಗಿನ ಶಿಕ್ಷಣ ಈ ಮಾದರಿಯಲ್ಲಿದ್ದಾಗ ಮಾತ್ರ ವಿಜ್ಞಾನದ ಯುಗದಲ್ಲಿ ನೈತಿಕತೆ ಉಳಿದಿರಲು ಸಾಧ್ಯ. ಶ್ರೀರಾಮಕೃಷ್ಣ ಆಶ್ರಮ ಹಾಗೂ ಅದರ ಅಂಗಸಂಸ್ಥೆಗಳು ಈ ದಿಶೆಯಲ್ಲಿ ಕಾರ್ಯ ತತ್ಪರವಾಗಿವೆ' ಎಂದು ನುಡಿದರು.

ಶ್ರೀರಾಮಕೃಷ್ಣ ಮಿಷನ್ ಹಾಗೂ ಮಠದ ಪ್ರಧಾನ ಅಧ್ಯಕ್ಷರಾದ ಶ್ರೀಮತ್ ಸ್ವಾಮಿ ರಂಗನಾಥಾನಂದಜೀ ಮಹಾರಾಜರ ನಾಲ್ಕು ಸಂಪುಟಗಳ 'ಪರಿವರ್ತನಶೀಲ ಸಮಾಜಕ್ಕೆ ಶಾಶ್ವತ ಮೌಲ್ಯಗಳು' ಎಂಬ ಗ್ರಂಥದ ಕನ್ನಡ ಅವತರಣಿಕೆಯ ಪ್ರಥಮ ಸಂಪುಟ 'ದರ್ಶನ ಮತ್ತು ಅಧ್ಯಾತ್ಮ'ವನ್ನು ಶಿಲಾಂಗ್ ರಾಮಕೃಷ್ಣ ಮಿಷನ್ನಿನ ಕಾರ್ಯದರ್ಶಿಗಳಾದ ಸ್ವಾಮಿ ಜಗದಾತ್ಮಾನಂದಜೀಯವರು ಬಿಡುಗಡೆ ಮಾಡಿದರು. ಭಕ್ತ ಸಮ್ಮೇಳನದಲ್ಲಿ ನೆರೆದಿರುವ ಪ್ರತಿನಿಧಿಗಳನ್ನುದ್ದೇಶಿಸಿ ಭಕ್ತಿಯ ಮಹತ್ತ್ವವನ್ನು ವಿವರಿಸುತ್ತಾ ಸ್ವಾಮಿ ಜಗದಾತ್ಮಾನಂದಜೀಯವರು, 'ಭಗವಂತನಲ್ಲಿ ನಿಷ್ಠೆ ಬೆಳೆಸಿಕೊಳ್ಳಲು ಭಕ್ತಿ ಮೊದಲ ಹಂತ. ಭಕ್ತನ ಹೃದಯವೇ ಭಗವಂತನ ಆಲಯ. ಆತ್ಮ ಸ್ವರೂಪಿಯಾದ ಭಗವಂತನ ನೆಲೆ ಅಲ್ಲಿ. ದ್ವೇಷ ಅಸೂಯಾದಿ ಅರಿಷಡ್ವರ್ಗಗಳನ್ನು ದೂರಮಾಡಿ ಮನಸ್ಸನ್ನು ನಿಯಂತ್ರಿಸಿಕೊಳ್ಳಿ. ಸರ್ವ ಶಕ್ತನಾದ ಭಗವಂತನಲ್ಲಿ ದೃಢ ವಿಶ್ವಾಸ ಬೆಳೆಸಿಕೊಳ್ಳಿ' ಎಂದು ನುಡಿದರು.

ಅಧ್ಯಕ್ಷಪೀಠದಿಂದ ಆಶೀರ್ವಚನವನ್ನು ಮಾಡಿದ ಬೆಂಗಳೂರಿನ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಹರ್ಷಾನಂದಜೀಯವರು 'ಶ್ರೀರಾಮಕೃಷ್ಣ ಪರಮಹಂಸರು, ಶ್ರೀಮಾತೆ ಶಾರದಾದೇವಿಯವರು ಮತ್ತು ಸ್ವಾಮಿ ವಿವೇಕಾನಂದರು ತ್ರಿಕೂಟಾಚಲ ಕೇಂದ್ರ ಬಿಂದುವಾದರೆ ಅವರ ಪ್ರತ್ಯಕ್ಷ ಶಿಷ್ಯವರ್ಗ ಅವರನ್ನು ಬಳಸಿದ ಮೊದಲ ವೃತ್ತ; ಅವರನ್ನು ಸುತ್ತುವರಿದ ದೀಕ್ಷಾಬದ್ಧ ಶಿಷ್ಯವರ್ಗ ಎರಡನೆಯ ವೃತ್ತ; ಇವರನ್ನು ಸುತ್ತುವರಿದಿರುವ ನಿಷ್ಠಾವಂತ ಭಕ್ತರು ಮೂರನೆ ವೃತ್ತ; ಇವರನ್ನು ಸುತ್ತುವರಿದಿರುವ ಸ್ನೇಹಿತರು ಮತ್ತು ಹಿತೈಷಿಗಳ ಗುಂಪು ನಾಲ್ಕನೆಯ ವೃತ್ತ. ಎಲ್ಲ ವೃತ್ತಗಳನ್ನೂ ಸುತ್ತುವರಿದಿದೆ ಶ್ರೀರಾಮಕೃಷ್ಣರ ಕೃಪೆಯೆಂಬ ರಕ್ಷಾ ಕವಚ. ಇದು ಆಧ್ಯಾತ್ಮಿಕ ಕೋಟೆ. ಅಭೇದ್ಯವಾದ ಈ ಕೋಟೆಯ ಒಳಗೆ ಇರುವವರೆಲ್ಲಾ ಸುರಕ್ಷಿತರು. ಇಂದಿನ ತರುಣ ಪೀಳಿಗೆಗೆ ಈ ಬಗೆಯ ಆಧ್ಯಾತ್ಮಿಕ ಶ್ರೀರಕ್ಷೆ ಅಗತ್ಯ 'ಎಂದು ಮನೋಜ್ಞವಾಗಿ ನುಡಿದರು.

ಅಂದು ಸಂಜೆ ಶ್ರೀರಾಜಕುಮಾರ್ ಭಾರತಿಯವರು ತಮ್ಮ ಸುಶ್ರಾವ್ಯ ಕಂಠದಿಂದ ದಾಸರ ಪದಗಳನ್ನು ಹಾಡಿ ಭಕ್ತವೃಂದವನ್ನು ರಂಜಿಸಿದರು.

## ೧೯.೦೫.೨೦೦೦ (ಶುಕ್ರವಾರ)

ಭಕ್ತ ಸಮ್ಮೇಳನದ ನಾಲ್ಕೂ ದಿನಗಳು ಸಭಾಮಂಟಪದಲ್ಲಿ ಪ್ರಾತಃಕಾಲದಲ್ಲಿ ಮಂಗಳಾರತಿ ವೇದಪಾಠ, ಇರುತ್ತಿತ್ತು. ನಂತರ ಸ್ವಾಮಿ ಆತ್ಮವಿದಾನಂದಜೀಯವರ ಮಾರ್ಗದರ್ಶನದಲ್ಲಿ ಧ್ಯಾನ ಮತ್ತು ಭಜನೆಗಳು ಇರುತ್ತಿದ್ದವು.

### ಮೊದಲನೆಯ ಅಧಿವೇಶನ: ಬೆಳಗ್ಗೆ ೮.೪೫-೧೦.೩೦

### ವಿಷಯ: ಶ್ರೀರಾಮಕೃಷ್ಣ ಪರಮಹಂಸರು.



ಎಡದಿಂದ ಎನ್. ಕೃಷ್ಣಸ್ವಾಮಿ, ಸ್ವಾಮಿ ಗಿರಿಜೇಶಾನಂದಜಿ, ಸ್ವಾಮಿ ಪೀತಾಂಬರಾನಂದಜಿ, ಸ್ವಾಮಿ ರಾಘವೇಶಾನಂದಜಿ ಮತ್ತು ಸ್ವಾಮಿ ಪೂರ್ಣಕಾಮಾನಂದಜಿ

'ಶ್ರೀರಾಮಕೃಷ್ಣರ ತ್ಯಾಗಜೀವನ' ಎಂಬ ವಿಷಯ ಕುರಿತು ಬೆಂಗಳೂರಿನಲ್ಲಿರುವ ಅಲಸೂರಿನ ಸ್ವಾಮಿ ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಸ್ವಾಮಿ ರಾಘವೇಶಾನಂದಜೀಯವರು ಮಾತನಾಡುತ್ತಾ 'ಕಮಲಪತ್ರದಂತೆ ಲೌಕಿಕ ಜೀವನದ ಮಧ್ಯೆ ಇದ್ದೂ ಅಧ್ಯಾತ್ಮದ ತುತ್ತತುದಿಗೇರಬಹುದು. ಮಾನವ ಕಲ್ಯಾಣವನ್ನು ಸಾಧಿಸಬಹುದು ಎಂಬುದಕ್ಕೆ ಶ್ರೀರಾಮಕೃಷ್ಣ-ಶ್ರೀಮಾತೆಯವರ ಜೀವನ-ಸಾಧನೆಗಳೇ ಜೀವಂತ ಪ್ರಮಾಣ. ಶ್ರೀರಾಮಕೃಷ್ಣರು ಪತ್ನಿಯನ್ನೂ ತೊರೆಯಲಿಲ್ಲ, ಕಾಡಿಗೂ ಹೋಗಲಿಲ್ಲ, ಕುಳಿತಲ್ಲೇ ತಮ್ಮ ವಿಶುದ್ಧ ವಿರಕ್ತ ಭಾವದಿಂದ ಅಗತ್ಯವಾದ ಎಲ್ಲವನ್ನೂ ಸಾಧಿಸಿದರು' ಎಂದು ಶ್ರೀರಾಮಕೃಷ್ಣರ ತ್ಯಾಗದ ಪರಾಕಾಷ್ಠತೆಯನ್ನು ನಿದರ್ಶನಗಳೊಂದಿಗೆ ವಿವರಿಸಿದರು.

ಬಳಿಕ ಮಂಗಳೂರಿನ ರಾಮಕೃಷ್ಣ ಮಠದ ಅಧ್ಯಕ್ಷ ಸ್ವಾಮಿ ಪೂರ್ಣಕಾಮಾನಂದಜೀ ಅವರು 'ಸಾಧನೆಯ ಬಗ್ಗೆ ಗೃಹಸ್ಥರಿಗೆ ಶ್ರೀರಾಮಕೃಷ್ಣರ ಉಪದೇಶ' ಎಂಬ ವಿಷಯ ಕುರಿತು ವಿವರಿಸುತ್ತಾ 'ನೌಕೆ ನೀರಿನ ಮೇಲೆ ಇರಬೇಕೇ ವಿನಾ ನೌಕೆಯೊಳಗೆ ನೀರು ಇರಬಾರದು' ಎಂಬ ನಿದರ್ಶನವನ್ನು ಗೃಹಸ್ಥರ ನಿತ್ಯ ಜೀವನದೊಳಗೆ ಸಮೀಕರಿಸಿದರು. 'ಜೀವನದಲ್ಲಿ ಗುರಿ ಇರಬೇಕು. ಆ ಗುರಿ ಭಗವಂತನ ಕಡೆಗಿರಬೇಕು. ಭಗವಂತನಿಗೆ ಅಭಿಮುಖವಾಗಿ ಹೋಗುವುದು ಜ್ಞಾನ. ವಿರುದ್ಧವಾಗಿ ಹೋಗುವುದು ಅಜ್ಞಾನ. ಭಗವಂತನ ಕೃಪೆ ಹಾಯಿ ದೋಣಿಯಂತೆ ಇದ್ದು ನಮ್ಮನ್ನು ಸೌಖ್ಯವಾಗಿ ದಡ ಮುಟ್ಟಿಸುವುದು' ಎಂದರು.

ನಂತರ ಶ್ರೀರಾಮಕೃಷ್ಣರ ದೃಷ್ಟಾಂತ ಕಥೆಗಳ ಮೂಲಕ ಅವರ ಬೋಧನೆಗಳ ಮೇಲೆ ಬೆಳಕು ಚೆಲ್ಲಿದವರು ನೂತನವಾಗಿ ಜಮ್ಮು ವಿನಲ್ಲಿ ಸ್ಥಾಪಿಸಿರುವ ರಾಮಕೃಷ್ಣ ಮಿಷನ್ನಿನ ಕಾರ್ಯದರ್ಶಿಗಳಾದ ಸ್ವಾಮಿ ಗಿರಿಜೇಶಾನಂದಜೀಯವರು. 'ತಾಯಿ ಮಗುವಿಗೆ ಕಥೆ ಹೇಳಿದರೆ ಅದು ನಿದ್ದೆ ಹೋಗುತ್ತದೆ. ಆದರೆ ಶ್ರೀರಾಮಕೃಷ್ಣರು ಹೇಳುತ್ತಿದ್ದ ಕಥೆಗಳು ಅಜ್ಞಾನದ ನಿದ್ರೆಯಲ್ಲಿರುವವರನ್ನು ಜಾಗೃತಗೊಳಿಸುವಂಥದ್ದು. ಆ ಕಥೆಗಳು ಸಂದೇಶ-ಆದೇಶ-ಉಪದೇಶ ಗಳಿಂದ ಕೂಡಿದ್ದವು' ಎಂದು ನುಡಿದು ಸ್ವಾಮೀಜಿಯವರು ಇವುಗಳನ್ನಾಧರಿಸಿದ ಕೆಲವು ಕಥೆಗಳನ್ನು ಹೇಳಿ ಅವುಗಳಲ್ಲಿರುವ ಹಾಸ್ಯಪ್ರಜ್ಞೆಯನ್ನು ಎತ್ತಿ ತೋರಿಸಿದರು.

ಕಡೆಯದಾಗಿ ಶ್ರೀರಾಮಕೃಷ್ಣರ ಮಾನವೀಯತೆಯ ಬಗ್ಗೆ ಪ್ರೊ. ಎನ್. ಕೃಷ್ಣಸ್ವಾಮಿಯವರು ಮಾತನಾಡಿ ಮಾನವೀಯತೆ ಎಂದರೇನು ಎಂಬುದನ್ನು ವಿವರಿಸಿ 'ಮಾನವೀಯತೆಯ ಮುಖ್ಯ ಲಕ್ಷಣ ಸಹಾನುಭೂತಿ. ಅಣುವಿನೊಂದಿಗೆ ಅಣುವಾಗಿ ಮಹತ್ತಿನೊಂದಿಗೆ ಮಹತ್ತಾಗಿರುತ್ತಿದ್ದ ಶ್ರೀರಾಮಕೃಷ್ಣರು ಸಾಮಾನ್ಯ ವ್ಯಕ್ತಿಯೂ ಹೌದು, ದೈವಿಕಪುರುಷರೂ ಹೌದು. ಅವರ ಮಾನವೀಯತೆ ಸರ್ವ ಕಾಲ, ಸರ್ವದೇಶ, ಸರ್ವಜನಾಂಗಕ್ಕೂ ಅನುಕರಣೀಯ' ಎಂದರು.

ಈ ಅಧಿವೇಶನದ ಅಧ್ಯಕ್ಷರಾದ, ಚಂಡೀಘಡ ರಾಮಕೃಷ್ಣ ಮಿಷನ್ ಆಶ್ರಮದ ಮುಖ್ಯಸ್ಥರಾದ ಸ್ವಾಮಿ ಪೀತಾಂಬರಾನಂದಜೀ ಯವರು 'ಶ್ರೀರಾಮಕೃಷ್ಣರಂಥ ಆನಂದಾನುಭೂತಿಯ ವ್ಯಕ್ತಿತ್ವ ಬೇರಾರಲ್ಲೂ ಕಾಣಸಿಗದು. ಅವರಲ್ಲಿ ಆನಂದವಿಲ್ಲದ ಅನುಭವ ಬಹು ಅಪರೂಪ. ಶ್ರೀರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರಲ್ಲೊಬ್ಬರಾದ ಸ್ವಾಮಿ ಶಿವಾನಂದರು ಹೇಳುವಂತೆ, ಜೀವಾತ್ಮಗಳು ಬಂದು ಹೋಗುತ್ತವೆ. ಚಿದಾನಂದ ಬ್ರಹ್ಮ ಬರುವುದೂ ಇಲ್ಲ ಅಂದಮೇಲೆ ಹೋಗುವ ಮಾತೆಲ್ಲಿ? ಆದರೆ ಅವತಾರಗಳು ಬರುತ್ತವೆ, ಜನತೆಯ ಹೃನ್ಮಂದಿರದಲ್ಲಿ ನೆಲೆ ನಿಲ್ಲುತ್ತವೆ. ಅಂಥ ಕೆಲವೇ ಅವತಾರ ಪುರುಷರಲ್ಲಿ ರಾಮಕೃಷ್ಣರು ಅಗ್ರಮಾನ್ಯರು' ಎಂದರು.

**ಎರಡನೆಯ ಅಧಿವೇಶನ: ಬೆಳಿಗ್ಗೆ ೧೧.೦೦-೧೨.೩೦**

**ವಿಷಯ : ಕನ್ನಡದಲ್ಲಿ ರಾಮಕೃಷ್ಣ-ವಿವೇಕಾನಂದ ವೇದಾಂತ ಸಾಹಿತ್ಯದ ಬೆಳವಣಿಗೆ.**

**ಈ ಅಧಿವೇಶನವು ಮೈಸೂರು ಆಶ್ರಮದ ಹಿಂದಿನ ಅಧ್ಯಕ್ಷರಾದ ಶ್ರೀಮತ್ ಸ್ವಾಮಿ ಸೋಮನಾಥಾನಂದಜೀ ಯವರ ಸ್ಮರಣಾರ್ಥವಾಗಿ ಜರುಗಿತು.**

ರಾಮಕೃಷ್ಣ-ವಿವೇಕಾನಂದ ಸಾಹಿತ್ಯಕ್ಕೆ ಸೋಮನಾಥಾನಂದಜೀ ಯವರ ಕೊಡುಗೆಯ ಬಗ್ಗೆ ಪ್ರಸ್ತಾಪಿಸಿದ ಡಾ.ಪ್ರಭುಶಂಕರ ಅವರು 'ಸ್ವಾಮಿ ಸೋಮನಾಥಾನಂದರು ಉತ್ತಮ ಬರಹಗಾರರೂ ವಾಗ್ಮಿಗಳೂ ಆಗಿದ್ದರು. ಸರಳರಲ್ಲಿ ಸರಳರು. ಸದಾ ಹಸನ್ಮುಖಿ. ಎಲ್ಲರಲ್ಲೂ ಆತ್ಮೀಯರಾಗಿರುತ್ತಿದ್ದರು. ಇಂಥ ಮಹಾ ಚೇತನದ ಹೃದಯದಿಂದ ಮೂಡಿ ಬಂದ ಸಾಹಿತ್ಯದ ಹಿರಿಮೆಯನ್ನು ಮಾತು ಗಳಿಂದ ವಿವರಿಸಬೇಕಾಗಿಲ್ಲ. ಕನ್ನಡದ ಜನತೆ ಅವರ ಕೃತಿಗಳನ್ನು ಓದಿ ತನ್ಮಯರಾಗಿದ್ದರೆ ಅವರ ಸರಳವಾದ ಭಾಷಣ ಕೇಳಿ ಪುಲಕಿತರಾಗಿದ್ದರೆಂದರೆ ಅದು ಮಾತಲ್ಲ, ಅನುಭವದ ನುಡಿ' ಎಂದು ತಿಳಿಸಿದರು.

ನಂತರ ಡಾ.ಜಿ.ಎಸ್.ಶಿವರುದ್ರಪ್ಪನವರು ಶ್ರೀರಾಮಕೃಷ್ಣ ವಿವೇಕಾನಂದ ವೇದಾಂತ ಸಾಹಿತ್ಯಕ್ಕೆ ರಾಷ್ಟ್ರಕವಿ ಕುವೆಂಪು ಅವರ ಕೊಡುಗೆಯ ಬಗ್ಗೆ ಮಾತನಾಡಿದರು. 'ಶ್ರೀ ಕುವೆಂಪು ಜನ್ಮಸಿದ್ಧ ಕವಿ ಹಾಗೂ ಸಾಹಿತಿ. ಅವರು ಶ್ರೀರಾಮಕೃಷ್ಣ ವಿವೇಕಾನಂದ ಸಾಹಿತ್ಯ ಮಾಲೆಗೆ ಸಮರ್ಪಿಸಿದ ಕುಸುಮಗಳು ವರ್ಣಪುಷ್ಪಗಳಂತಿವೆ.



ಎಡದಿಂದ ಪ್ರೊ.ಎಂ.ರಾಮಚಂದ್ರ, ಡಾ.ಜಿ.ಎಸ್. ಶಿವರುದ್ರಪ್ಪ, ಸ್ವಾಮಿ ಹರ್ಷಾನಂದಜಿ, ಡಾ.ಪ್ರಭುಶಂಕರ ಮತ್ತು ಪ್ರೊ.ಅ.ರಾ.ಮಿತ್ರ

ದಿವ್ಯತ್ರಯರ ವ್ಯಕ್ತಿತ್ವ ಕುರಿತು ರಚಿಸಿದ ಅವರ ಕವನಗಳು ಅತ್ಯಂತ ಜನಪ್ರಿಯವಾಗಿವೆ. ಶ್ರೀರಾಮಕೃಷ್ಣರನ್ನು ಕುರಿತು, ಅಂತರತಮ ನೀ ಗುರು ಹೇ ಆತ್ಮತಮೋಹಾರಿ ಎಂದು ಹೇಳಿರುವುದು ಅರ್ಥಪೂರ್ಣ, ಭಾವಪೂರ್ಣ. ತಮ್ಮ ಮೇರುಕೃತಿಯಾದ 'ರಾಮಾಯಣ ದರ್ಶನ' ದಲ್ಲಿ ಒಂದೆಡೆ,ತಾವು ರಾಮಕೃಷ್ಣ ವಂಶಸಂಜಾತನೋ! ಎಂದಿರುವ ಮಾತು ಸುಂದರ, ಸಮಂಜಸ'ಎಂದು ವಿವರಿಸಿದರು.

ರಾಮಕೃಷ್ಣ-ವಿವೇಕಾನಂದ ಸಾಹಿತ್ಯಕ್ಕೆ ಕನ್ನಡ ಸಾಹಿತಿಗಳ ಕೊಡುಗೆಯ ಬಗ್ಗೆ ಪ್ರಸ್ತಾಪ ಮಾಡಿದ ಕಾರ್ಕಳದ ಶ್ರೀ ಎಂ. ರಾಮಚಂದ್ರ ಅವರ 'ಶಿವನ ಜಡೆಯಿಂದ ಹೊರಟ ಗಂಗೆ ಅಗಸ್ತ್ಯರ ಕಮಂಡಲದಿಂದ ಕಾವೇರಿಯಾಗಿ ಹರಿದಳು' ಎಂಬ ಉದ್ಗಾರ ಎಷ್ಟು ಅನ್ವರ್ಥವಾಗಿದೆ! ಉತ್ತರದ ಮಹಾನ್ ಚೇತನಗಳ ಚೈತನ್ಯ ಕಾವೇರಿಯ ನಾಡನುಡಿಯಲ್ಲಿ ಹರಿದಿರುವುದು ನಮ್ಮ ಪುಣ್ಯ. ಈ ದಿಸೆಯಲ್ಲಿ ಶ್ರಮಿಸಿದ ಕನ್ನಡದ ಕವಿಗಳು, ಸಾಹಿತಿಗಳು ಹಲವ ರಿದ್ದಾರೆ. ಶ್ರೀಕುವೆಂಪುರವರಂತೆ ಇಂಥ ಸಾಹಿತ್ಯ ರಚನೆಯಲ್ಲಿ ಜನಪ್ರಿಯರಾಗಿರುವ ತಳುಕಿನ ವೆಂಕಣ್ಣಯ್ಯ, ತ.ಸು. ಶಾಮರಾಯ ರನ್ನು ಮರೆಯುವಂತಿಲ್ಲ. ಅಂತೆಯೇ ಶ್ರೀಯುತರಾದ ಎ.ಆರ್. ಕೃಷ್ಣಶಾಸ್ತ್ರಿ, ರಂಗನಾಥ ದಿವಾಕರರು, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಶಿವರುದ್ರಪ್ಪ, ಸಿ.ಪಿ.ಕೃಷ್ಣಕುಮಾರ್ ಹೀಗೆ ಹಲವ ರಿದ್ದಾರೆ. 'ಕೆಲವು ಸಾಹಿತ್ಯಗಳನ್ನು ಮುಟ್ಟಿದರೆ ಕೈತೊಳೆದುಕೊಳ್ಳ ಬೇಕು. ರಾಮಕೃಷ್ಣ-ವಿವೇಕಾನಂದರ ಎಲ್ಲ ಬಗೆಯ ಸಾಹಿತ್ಯಗಳನ್ನು ಕೈತೊಳೆದು ಮುಟ್ಟಬೇಕು' ಎಂದು ಇಂತಹ ಚೇತೋಹಾರಿಯಾದ ಸಾಹಿತ್ಯದ ಶ್ರೇಷ್ಠತೆಯನ್ನು ಮನಮುಟ್ಟುವಂತೆ ತಿಳಿಸಿದರು.

'ಕನ್ನಡ ಸಾಹಿತ್ಯದ ಮೇಲೆ ರಾಮಕೃಷ್ಣ-ವಿವೇಕಾನಂದರ ಪ್ರಭಾವ' ಎಂಬ ವಿಷಯ ಕುರಿತು ಪ್ರೊ. ಅ. ರಾ. ಮಿತ್ರರು ಮಾತನಾಡಿದರು. 'ಯಾರ ಮೇಲೆಯೇ ಆಗಲಿ, ಶ್ರೀರಾಮಕೃಷ್ಣ-ವಿವೇಕಾನಂದ-ಶ್ರೀಮಾತೆಯವರ ಪ್ರಭಾವ "ಕಚ್ಚಿದರೆ ಕಬ್ಬು — ಹಿಂಡಿದರೆ ಜೇನು"ಎಂಬಂತೆ ಅದರ ಮಾಧುರ್ಯದಿಂದ ಬದುಕನ್ನು ತುಂಬಿಸುತ್ತದೆ. ಆ ಪ್ರಭಾವದ ಶೀತಲಕಿರಣ ಸಾಹಿತ್ಯದಲ್ಲಿ ಪಡಿಮೂಡದಿರಲು ಸಾಧ್ಯವೇ? ಕನ್ನಡಸಾಹಿತ್ಯದಲ್ಲಿ ಮೂಡಿಬಂದಿರುವ ಅಸಂಖ್ಯಾತ ಕೃತಿಗಳ ಮೂಲಕ— ಆ ಮೂರೂ ಚೇತನಗಳ ಜೀವನ—ಸಾಧನೆಗಳು ಇಂದಿಗೂ-ಮುಂದೆಯೂ ಕನ್ನಡಿಗರಿಗೆ ಪರಮಾದರ್ಶ ನೀಡಬಲ್ಲ ಭಾಗ್ಯಜ್ಯೋತಿಗಳು' ಎಂಬ ತಮ್ಮ ವಿಚಾರಧಾರೆಯನ್ನು ಸೋದಾಹರಣವಾಗಿ ವಿವರಿಸಿದರು.



ಕುಮಾರಿ ವಾರಿಜಾಶ್ರೀ ವೇಣುಗೋಪಾಲ್
ಅವರ ಸಂಗೀತ ಸುಧೆಯ ಕಾರ್ಯಕ್ರಮ

ಈ ಅಧಿವೇಶನದ ಅಧ್ಯಕ್ಷರಾದ ಸ್ವಾಮಿ ಹರ್ಷಾನಂದಜೀಯವರು 'ಸ್ಫೂರ್ತಿಯುತ ಸಾಹಿತ್ಯ ಮನದ ಕದವನ್ನು ತಟ್ಟಿ ತೆಗೆಸುವಂತಿರಬೇಕು. ಇಂಥ ಸಾಹಿತ್ಯ ರಚನೆಯಲ್ಲಿ ಶ್ರೀಮತ್ ಸ್ವಾಮಿ ಸೋಮನಾಥಾನಂದಜೀಯವರು ಹಾಗೂ ಆದಿದೇವಾನಂದಜೀಯವರು ಸಿದ್ಧ ಹಸ್ತರು. ಇಂತಹ ಹಿರಿಯರು ನಡೆದುಹೋದ ದಾರಿ, ಈ ಬಗೆಯ ಸಾಹಿತ್ಯ ರಚನೆ ಇಂದಿನ ಜನಾಂಗದ ಯುವಪೀಳಿಗೆಗೆ ಅತಿ ಅಗತ್ಯ' ಎಂದು ನುಡಿದರು.

ಮಧ್ಯಾಹ್ನ ನಡೆದ ಕುಮಾರಿ ವಾರಿಜಾಶ್ರೀ ವೇಣುಗೋಪಾಲ್ ಅವರ ಸಂಗೀತ ಸುಧೆಯ ಕಾರ್ಯಕ್ರಮ ವಿಶಿಷ್ಟಪೂರ್ಣವಾದುದು. ಎಂಟು ವರ್ಷಗಳ ಬಾಲೆ ವೇದಿಕೆಯಮೇಲೆ ರಾಗ ತಾಳ ಲಯ ಬದ್ಧವಾಗಿ ನುರಿತ ಸಂಗೀತಗಾರರಂತೆ ಭಾವಪೂರ್ಣವಾಗಿ ಹಾಡಿ ಎಲ್ಲರನ್ನೂ ಚಕಿತಗೊಳಿಸಿದರು.

**ಮೂರನೆಯ ಅಧಿವೇಶನ: ಮಧ್ಯಾಹ್ನ ೪.೦೦-೫.೩೦**

**ವಿಷಯ: ರಾಮಕೃಷ್ಣ-ವಿವೇಕಾನಂದ ಭಾವಪ್ರಚಾರ**

**ಈ ಅಧಿವೇಶನವು ಮೈಸೂರು ಆಶ್ರಮದ ಸಂಸ್ಥಾಪಕ ಅಧ್ಯಕ್ಷರಾದ ಶ್ರೀಮತ್ ಸ್ವಾಮಿ ಸಿದ್ಧೇಶ್ವರಾನಂದಜೀಯವರ ಸ್ಮರಣಾರ್ಥ ಜರುಗಿತು.**

ಮೊದಲಿಗೆ ಹೈದರಾಬಾದಿನ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಪರಮಾರ್ಥಾನಂದಜೀಯವರು ಆಂಧ್ರಪ್ರದೇಶದಲ್ಲಿ


ಎಡದಿಂದ, ಸ್ವಾಮಿ ಪರಮಾರ್ಥಾನಂದಜಿ, ಸ್ವಾಮಿ ಪುರುಷೋತ್ತಮಾನಂದಜಿ ಮತ್ತು ಶ್ರೀ ಜಿ.ಎಸ್.ಜಯದೇವ.

ಭಾವಪ್ರಚಾರದ ಅನುಭವದ ಬಗ್ಗೆ ಹೇಳಿದರು. ಆಂಧ್ರದ ಗ್ರಾಮಸ್ಥರು ಕಷ್ಟ ಕಾರ್ಪಣ್ಯದಿಂದ ಜೀವನ ನಡೆಸುತ್ತಿದ್ದರೂ ಸತ್ಯವಂತರು, ನಿಷ್ಠಾವಂತರು ಹಾಗೂ ಮುಗ್ಧರು. ಅವರಿಗೆ ಶ್ರೀರಾಮಕೃಷ್ಣ ಶ್ರೀಮಾತೆಯವರ ಆದರ್ಶ ಬಹಳ ಪ್ರಿಯ. ಆಂಧ್ರಪ್ರದೇಶದ ಯಾವ ಹಳ್ಳಿಗೆ ಹೋದರೂ ಶ್ರೀರಾಮಕೃಷ್ಣರ ಭಾವಚಿತ್ರದೆದುರಿಗೆ ಕುಳಿತು ಭಕ್ತಿ ಪೂರ್ವಕವಾಗಿ ಹಾಡುವ ಜನರನ್ನು ಕಾಣಬಹುದು. ಅಲ್ಲಿನ ಗ್ರಾಮಗ್ರಾಮಗಳಲ್ಲಿ ಜನರು ತಮ್ಮ ಗಳಿಕೆಯಿಂದ ಸ್ವಲ್ಪ ಸ್ವಲ್ಪವಾಗಿ ಕೂಡಿಟ್ಟ ಹಣವನ್ನು ಸಂಗ್ರಹಿಸಿ ಇಂಥ ಭಾವಾತ್ಮಕ ಭಕ್ತ ಸಮ್ಮೇಳನಗಳನ್ನು ನಡೆಸಿದ್ದಾರೆ, ನಡೆಸುತ್ತಿದ್ದಾರೆ. ಇಂತಹ ಕಾರ್ಯ ಕರ್ನಾಟಕದ ಗ್ರಾಮಗಳಲ್ಲಿ ಕೂಡ ನಡೆಯಬೇಕು ಎಂದು ಸ್ವಾಮೀಜಿಯವರು ಆಶಿಸಿದರು.

ನಾರಾಯಣ ಸೇವೆ ಮತ್ತು ನಮ್ಮ ಆಧ್ಯಾತ್ಮಿಕ ಜೀವನ ಎಂಬ ವಿಷಯ ಕುರಿತು ಚಾಮರಾಜನಗರದ ದೀನಬಂಧು ಟ್ರಸ್ಟ್‌ನ ಮುಖ್ಯಸ್ಥರಾದ ಶ್ರೀ ಜಿ.ಎಸ್. ಜಯದೇವ ಅವರು ಮಾತನಾಡಿದರು. ವಿವೇಕಾನಂದರು ಹೇಳುವಂತೆ ದಲಿತರೆನ್ನ ದೇವರು - ಮೂರ್ಖರೆನ್ನ ದೇವರು ಎಂಬ ನುಡಿ ಇಂದಿನ ಸಂದರ್ಭಕ್ಕೆ ಸಮಂಜಸ. ದೀನದಲಿತರು ಅನಾಥರಿಗೆ ಮಾಡುವ ಸೇವೆ ನೈಜದಲ್ಲಿ ನಾರಾಯಣ ಸೇವೆ ಎಂದು ಹೇಳುತ್ತಾ ತಾವು ನಡೆಸುತ್ತಿರುವ ಅನಾಥಾಶ್ರಮದ ಪ್ರಯೋಗಾತ್ಮಕ ಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ನೀಡಿದರು.

ನಂತರ ಕರ್ನಾಟಕದಾದ್ಯಂತ ಇರುವ ಖಾಸಗಿ ಆಶ್ರಮ ಮತ್ತು ಸಂಸ್ಥೆಗಳ ಕಾರ್ಯಚಟುವಟಿಕೆಗಳ ಬಗ್ಗೆ ಅಲ್ಲಿನ ಭಕ್ತರು ಮಾಹಿತಿ ನೀಡುವ ಕಾರ್ಯಕ್ರಮವಿತ್ತು. ಬೆಂಗಳೂರಿನ ಶ್ರೀ ಬಿ.ಎನ್ ಸೋಮಶೇಖರ್, ತುಮಕೂರಿನ ಶ್ರೀರಾಮಕೃಷ್ಣ-ವಿವೇಕಾನಂದ ಆಶ್ರಮದ ಭಕ್ತೆ ಕುಮಾರಿ ಕನಕಲಕ್ಷ್ಮಿ, ಧಾರವಾಡದ ಆಶ್ರಮದ ಶ್ರೀ ರಾಜಶೇಖರ್—ಇವರುಗಳು ತಮ್ಮ ಸಂಸ್ಥೆಗಳಲ್ಲಿ ನಡೆದು ಬರುತ್ತಿರುವ ಧಾರ್ಮಿಕ ಕಾರ್ಯಕ್ರಮಗಳ ಸಂಕ್ಷಿಪ್ತ ವರದಿಯನ್ನು ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪೊನ್ನಂಪೇಟೆಯ ಶ್ರೀರಾಮಕೃಷ್ಣ-ಶಾರದಾಶ್ರಮದ ಅಧ್ಯಕ್ಷರಾದ ಸ್ವಾಮಿ ಪುರುಷೋತ್ತಮಾನಂದಜೀ ಅವರು, 'ಎಲ್ಲಿ ಹೃದಯ

ಸ್ಪಂದಿಸುವುದೋ ಅಲ್ಲೇ ಭಾವಪ್ರಚಾರದ ಆರಂಭ, ಅಂಥ ಕಾರ್ಯ ಇಲ್ಲಿ ನಡೆಯುತ್ತಿದೆ. ಸ್ವಾಮಿ ವಿವೇಕಾನಂದರು ಇಡೀ ವಿಶ್ವದಲ್ಲೇ ಆಧ್ಯಾತ್ಮಿಕ ಜಾಗೃತಿಯನ್ನು ಮೂಡಿಸಿ ಈ ಭಾವಪ್ರಚಾರದ ಆದ್ಯ ಪ್ರವರ್ತಕರಾದರು' ಎಂದು ನುಡಿದು ತಾವು ರಚಿಸಿದ ಕವನವೊಂದರ ಭಾವಪೂರ್ಣ ಗಾನದಿಂದ ಭಕ್ತಸ್ತೋಮ ಮಂತ್ರಮುಗ್ಧವಾಗುವಂತೆ ಮಾಡಿದರು.

ಸಂಜೆ ಹರಿಕಥಾ ವಿದ್ವಾನ್ ಸಂತ ಭದ್ರಗಿರಿ ಅಚ್ಯುತದಾಸರು 'ಸತ್ಸಂಗದ ಮಹಿಮೆ' ಎಂಬ ವಿಷಯದ ಬಗ್ಗೆ ಕಥಾಕಾಲಕ್ಷೇಪವನ್ನು ನಡೆಸಿಕೊಟ್ಟು ಎಲ್ಲರನ್ನೂ ತನ್ಮಯಗೊಳಿಸಿದರು.

## ೨೦.೦೫.೨೦೦೦ (ಶನಿವಾರ)

### ನಾಲ್ಕನೆಯ ಅಧಿವೇಶನ: ಬೆಳಿಗ್ಗೆ ೮.೪೫-೧೦.೦೦
### ವಿಷಯ: ಶ್ರೀಮಾತೆ ಶಾರದಾದೇವಿ

ಮೊದಲಿಗೆ ಸಂಘಜನನೀ ಶ್ರೀ ಶಾರದಾದೇವಿ ಈ ವಿಷಯವಾಗಿ ಸೇಲಂನ ರಾಮಕೃಷ್ಣ ಮಿಷನ್ನಿನ ಕಾರ್ಯದರ್ಶಿಗಳಾದ ಸ್ವಾಮಿ ಸುಖಾತ್ಮಾನಂದಜೀಯವರು ಮಾತನಾಡಿ, 'ಶ್ರೀಮಾತೆಯವರು ತ್ಯಾಗಮಯೀ ಆದರೂ ಸಂಘಜೀವಿ. ಲೌಕಿಕ ದೃಷ್ಟಿಯಲ್ಲಿ ಮಕ್ಕಳಿಲ್ಲದ ಅವರಿಗೆ ತಮ್ಮ ಪತಿದೇವರ ಭಕ್ತವೃಂದದವರೆಲ್ಲ ಮಕ್ಕಳೇ. ಶ್ರೀರಾಮಕೃಷ್ಣ ಮಠದ ಸ್ಥಾಪನೆಯಾದುದು ಶ್ರೀಮಾತೆಯವರ ತಪಸ್ಸಿನ ಫಲದಿಂದ. ಶ್ರೀರಾಮಕೃಷ್ಣರ ಸಮಾಧಿಯ ನಂತರ ಅವರ ಸ್ಥಾನದಲ್ಲಿ ನಿಂತು ಅವರ ಎಲ್ಲ ಭಕ್ತರಿಗೂ ಸೂಕ್ತವಾದ ಮಾರ್ಗದರ್ಶನವಿತ್ತು ಸಂನ್ಯಾಸಿಗಳಲ್ಲಿ ಸಂಘಜೀವನ ನಡೆಸುವ ಸ್ಫೂರ್ತಿ, ಶಕ್ತಿ ತುಂಬಿದ ಸೂತ್ರಧಾರಿಣಿ ಶ್ರೀಮಾತೆ ಶಾರದಾದೇವಿ', ಎಂದು ನುಡಿದರು.

ಆದರ್ಶಗೃಹಿಣಿ ಶ್ರೀಮಾತೆ ಎಂಬ ವಿಚಾರ ಕುರಿತು ಮಾತನಾಡಿದವರು ಪಂಡಿತರತ್ನ ಶ್ರೀವೆಂಕಟರಾಮ ಶರ್ಮ ಅವರು, 'ಇಪ್ಪತ್ತಮೂರು ವರ್ಷದ ಜ್ಞಾನಸಂಪನ್ನ ಗುರು ಬಾಲಸಂಗಾತಿಯಾಗಿ ಆಯ್ಕೆ ಮಾಡಿಕೊಂಡ ಐದು ವರ್ಷದ ಬಾಲೆ ಶಾರದೆ. ಮುಗ್ಧ ಹುಡುಗಿ. ಪತಿಗೃಹಕ್ಕೆ ಬಂದ ಶಾರದೆ ಸತಿಯಾಗಿ ಬಂದಳು, ಪತಿಗೇ ಗುರುವಾಗಿ ನಿಂತಳು, ಅದೂ ಪತಿದೇವನ ಪ್ರಭಾವವೇ. ಶ್ರೀ ಶಾರದಾದೇವಿಯವರು ಗೃಹಿಣಿ ಮಾತ್ರವಲ್ಲ ಆದರ್ಶ ಪತಿವ್ರತಾ ಶಿರೋಮಣಿಯಾಗಿ ಪತಿಯೊಡನೆ ಬಾಳಿದವರು. ಆಚಾರ, ವಿಚಾರ ಮತ್ತು ಆಧ್ಯಾತ್ಮಿಕ ತಪಸ್ಸಿನಲ್ಲಿ ರಾಮಕೃಷ್ಣರಿಗೆ ಒಂದೇ ಭಾಗದ ಅವಿಭಾಜ್ಯ ಮುಖದಂತೆ ಇದ್ದರು' ಎಂದರು.

ನಂತರ ಶ್ರೀಮತಿ ವಿಜಯಭಾರತಿ ಅವರು 'ತಾಯ್ತನದ ಪ್ರತಿರೂಪ ಶ್ರೀಮಾತೆ' ಎಂಬ ವಿಷಯದ ಬಗ್ಗೆ ಮಾತನಾಡಿದರು. 'ಶ್ರೀ ಶಂಕರಾಚಾರ್ಯರು ತಮ್ಮ ದೇವೀ ಸ್ತುತಿಯಲ್ಲಿ ಗುಣಗಾನ ಮಾಡಿರುವ ಸಕಲ ಲಕ್ಷಣಗಳೂ, ಶ್ರೀಮಾತೆಯಲ್ಲಿ ಕಾಣ ಬರುತ್ತಿತ್ತು— ಸಹನೆ, ಭಕ್ತಜನರ ಹಿತರಕ್ಷಣೆ ಶ್ರೀಮಾತೆಯವರ ಹಿರಿತನ. ಎಲ್ಲ ವರ್ಗದ ಜನರಲ್ಲಿ ತಾಯಿಯಂತೆ ವಾತ್ಸಲ್ಯಮಯಿಯಾಗಿ ಅಮಿತ ವಿಶ್ವಾಸ ಮತ್ತು ಕಾಳಜಿಯನ್ನು ತೋರುತ್ತಿದ್ದರು. ಶ್ರೀರಾಮಕೃಷ್ಣರ ಜೀವನಗಾನಕ್ಕೆ ಅವರು ತಂಬೂರಿಯಂತಿದ್ದರು' ಎಂದು ಅವರು ನುಡಿದರು.

ಅಧ್ಯಕ್ಷಪೀಠದಿಂದ ಮಾತನಾಡಿ ಶ್ರೀಮಾತೆಯವರ ಆದರ್ಶಗಳನ್ನು ತಿಳಿಸಿದವರು ಚೆಂಗಲ್‌ಪೇಟೆಯ ರಾಮಕೃಷ್ಣ ಮಿಷನ್ನಿನ ಕಾರ್ಯದರ್ಶಿಗಳಾದ ಸ್ವಾಮಿ ವಿರೂಪಾಕ್ಷಾನಂದಜೀಯವರು. 'ಭಾವಾತ್ಮಕತೆಯಿಂದ ಎಲ್ಲವೂ ಲಭ್ಯ. ಅಂತರಂಗದ ಭಾವನೆಗಳಿಗೆ ನಾವು ಕಣ್ಣು ಮುಚ್ಚಿದರೆ ನಮ್ಮ ಪ್ರಗತಿ ಯಾವ ದೃಷ್ಟಿಕೋನದಿಂದಲೂ ಅಸಾಧ್ಯ. ಪರಸ್ಪರ ಪ್ರೀತಿ ಸೌಹಾರ್ದದಿಂದ ಮಾತ್ರ ಸುಗಮ ಜೀವನ ಸಾಧ್ಯ. ಈ ನಿಟ್ಟಿನಲ್ಲಿ ಶ್ರೀಮಾತೆ ಶಾರದಾದೇವಿಯವರು ಅಸಂಖ್ಯ ಸ್ತ್ರೀ-ಪುರುಷರಿಗೆ ಮಾರ್ಗದರ್ಶನ ನೀಡಿದ್ದಾರೆ' ಎಂದು ತಿಳಿಸಿದರು.




ಎಡದಿಂದ, ಸ್ವಾಮಿ ನಿತ್ಯಸ್ಥಾನಂದಜಿ, ಸ್ವಾಮಿ ಆತ್ಮವಿದಾನಂದಜಿ, ಪೂಜ್ಯ ಸಿದ್ಧೇಶ್ವರ ಸ್ವಾಮೀಜಿ, ಸ್ವಾಮಿ ಪರಮಾನಂದ ಭಾರತಿ, ಸ್ವಾಮಿ ಸುರೇಶಾನಂದಜಿ, ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮತ್ತು ಸ್ವಾಮಿ ಪೂರ್ಣಪ್ರಜ್ಞಾನಂದಜಿ

### ಐದನೆಯ ಅಧಿವೇಶನ: ಬೆಳಿಗ್ಗೆ ೧೦.೩೦-೧೨.೩೦
### ಸಂತ ಸಮಾಗಮ
### ವಿಷಯ: ದೈನಂದಿನ ಕಾರ್ಯಗಳ ಆಧ್ಯಾತ್ಮೀಕರಣ.

ಶ್ರೀಸುತ್ತೂರು ಮಠ, ಮೈಸೂರು ಇದರ ಮಠಾಧೀಶರಾದ ಜಗದ್ಗುರು ಶ್ರೀಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಮಾತನಾಡುತ್ತಾ, ನಿತ್ಯ ಜೀವನದಲ್ಲಿ ಆಧ್ಯಾತ್ಮಿಕ ಸಾಧನೆಗೆ ಕಾಲದ ಪರಿಮಿತಿಯಿಲ್ಲ—ಬೇಕಾಗೂ ಇಲ್ಲ. ನಾವು ಮಾಡುವ ದಿನನಿತ್ಯದ ಎಲ್ಲ ಕಾರ್ಯಗಳನ್ನೂ ಭಗವಂತನ ಆರಾಧನೆಯೆಂದು ತಿಳಿದು ಮಾಡಿದರೆ ನಮ್ಮ ಜೀವನದಲ್ಲಿ ಆಧ್ಯಾತ್ಮಿಕ ಶಕ್ತಿ ಹಾಸುಹೊಕ್ಕಾಗಿ ಬೆಳೆಯುತ್ತದೆ. ಅಭೇದ ಭಾವವನ್ನು ಬೆಳೆಸಿಕೊಂಡು ಹಿಮಾಲಯದಂತಹ ಮಹಾಚೇತನಗಳಿಂದ ಸ್ಫೂರ್ತಿಪಡೆದು ನಿತ್ಯ ಜೀವನವನ್ನು ಸಾರ್ಥಕ್ಯಗೊಳಿಸಿಕೊಳ್ಳಬೇಕು —ಎಂದು ಸಂದೇಶವಿತ್ತರು.

ಬೆಂಗಳೂರಿನ ಶ್ರೀಮತ್ ಪರಮಾನಂದ ಭಾರತೀ ಸ್ವಾಮೀಜಿಯವರು 'ದಿನದಲ್ಲಿ ಮಾಡಬೇಕಾದ ಮುಖ್ಯ ಕಾರ್ಯವೊಂದಿದ್ದರೆ

ಅದಕ್ಕಾಗಿ ಉಳಿದ ಕಾರ್ಯಗಳನ್ನು ಆ ಕಾಲಮಿತಿಗೆ ಅಳವಡಿಸಿಕೊಳ್ಳುತ್ತೇವೆ. ಆಧ್ಯಾತ್ಮಿಕ ಚಿಂತನೆಯೇ ಆ ಮುಖ್ಯ ಕಾರ್ಯ ಏಕಾಗಬಾರದು? ಬೇಡದ ಎಷ್ಟೋ ಕಾರ್ಯಗಳ ನಡುವೆ ಬೇಕಾದ ಈ ಕಾರ್ಯವನ್ನು ಅಳವಡಿಸಿಕೊಳ್ಳುವುದು ಶ್ರದ್ಧೆಯಿದ್ದರೆ ಕಷ್ಟವೇನಿಲ್ಲ. ಆದ್ದರಿಂದ ದೈನಂದಿನ ಕಾರ್ಯದಲ್ಲೂ ನಿಶ್ಚಿತ ಗುರಿಯಿರಬೇಕು. ಒಳ್ಳೆಯದನ್ನೂ, ಕೆಟ್ಟದನ್ನೂ ತಿಳಿಯಲು ಸಮಗ್ರದೃಷ್ಟಿ ಅಗತ್ಯ—ಇದು ಶಾಸ್ತ್ರಪ್ರಮಾಣದಿಂದ ಸಾಧ್ಯ. ಅಂತೆಯೇ ಅದನ್ನು ಬಲ್ಲ ಸಂತರ ಮಾರ್ಗದರ್ಶನವೂ ಮುಖ್ಯ' ಎಂದು ಆಶೀರ್ವಚನ ನೀಡಿದರು.

ಬಿಜಾಪುರದ ಜ್ಞಾನಯೋಗಾಶ್ರಮದ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರು ತಮ್ಮ ಭಾವಪೂರ್ಣ ನುಡಿಗಳಿಂದ ಭಕ್ತವೃಂದದ ಮನಸೆಳೆದರು. ಸಮಸ್ಯೆಗಳ ನಿರ್ಮಾಣವಾಗಲು ಪ್ರೇಮದ ಕೊರತೆಯೇ ಕಾರಣ. ಪ್ರೇಮದಲ್ಲಿ ಕಂಡರೆ ಕಲ್ಲಿನಲ್ಲೂ ದೈವತ್ವ ಗೋಚರ. ಎಲ್ಲವನ್ನೂ ಎಲ್ಲರನ್ನೂ ಪ್ರೀತಿಸಿದಾಗ ನಮ್ಮ ಎಲ್ಲ ಕಾರ್ಯ ಅಧ್ಯಾತ್ಮವಾಗುತ್ತದೆ. ಪ್ರೇಮ ಕೆಟ್ಟರೆ, ಭಾವ ಕೆಟ್ಟರೆ ಜಗತ್ತು ಕೆಡುತ್ತದೆ. ದೇವರನ್ನು ನೋಡೀನಿ ಮಾತ್ರ ಅಲ್ಲ, ನೋಡ್ತಾ ಇದ್ದೀನಿ ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಅಂಥ ಶುದ್ಧ ಪ್ರೇಮವಿದ್ದಲ್ಲಿ ಆ ದೇವರು ನಮಗೂ ಗೋಚರ. ಸೌಂದರ್ಯ ಮುಖದಲ್ಲಿಲ್ಲ, ಪ್ರಸನ್ನತೆಯಲ್ಲಿದೆ. ಪ್ರೇಮ ಮಗುವಿನ ಮುಗ್ಧಪ್ರೇಮದಂತಿರಬೇಕು' ಎಂದು ಅಧ್ಯಾತ್ಮದ ಮರ್ಮವನ್ನು ತಿಳಿಸಿದರು.

ಬೆಂಗಳೂರಿನ ಚಿನ್ಮಯ ಮಿಷನ್ನಿನ ಸ್ವಾಮಿ ಪೂರ್ಣಪ್ರಜ್ಞಾನಂದಜೀಯವರು 'ಜಗತ್ತಿನ ದೃಷ್ಟಿಯಲ್ಲಿ ಅತ್ಯಂತ ಅವನತಿಯ ಸ್ಥಿತಿಯಲ್ಲಿದ್ದ ಭಾರತದ ಹಿರಿಮೆಯನ್ನು ಜಗತ್ತಿಗೆ ಸಾರಿದ ಮಹಾಪುರುಷರಾದ ವಿವೇಕಾನಂದರು ಶಂಕರಾಚಾರ್ಯರ ಪ್ರತಿರೂಪವೇ ಆಗಿದ್ದಾರೆ. ವಿವೇಕಾನಂದರು ಧರೆಗೆ ಬಂದು ಶಂಕರರ ಕಾರ್ಯವನ್ನು ಪೂರ್ಣಗೊಳಿಸಿದರು. ಇಂದಿನ ವಿಜ್ಞಾನ ಯುಗದಲ್ಲಿ ಭಾರತೀಯರ ಅದ್ಭುತ ಸಾಧನೆಯ ಹಿಂದೆ ಹಿಂದಿನ ಋಷಿಮುನಿಗಳ ಆಧ್ಯಾತ್ಮಿಕ ಬಲವಿದೆ' ಎಂಬ ಅಭಿಪ್ರಾಯವನ್ನು ಮಂಡಿಸಿದರು.

ಮೈಸೂರು ಶ್ರೀರಾಮಕೃಷ್ಣಾಶ್ರಮದ ಅಧ್ಯಕ್ಷರಾಗಿದ್ದು ಈಗ ಏಕಾಂತವಾಗಿ ತಪಸ್ವೀ ಜೀವನ ನಡೆಸುತ್ತಿರುವ ಸ್ವಾಮಿ ಸುರೇಶಾನಂದಜೀಯವರು ಕಡೆಯಲ್ಲಿ ತಮ್ಮ ಅಧ್ಯಕ್ಷ ಭಾಷಣದಲ್ಲಿ 'ನಿಃಶ್ರೇಯಸಕ್ಕೆ ಲೌಕಿಕ ಅಭ್ಯುದಯ ವಿರುದ್ಧವಾಗಿರಬಾರದು, ಆತ್ಮದರ್ಶನಕ್ಕಾಗಿ ಮಾಡುವ ಅಧ್ಯಯನ ಅನುಸರಣೆಗೆ ಅನುವಾಗಬೇಕು' ಎಂದು ನಿದರ್ಶನಪೂರ್ವಕವಾಗಿ ವಿವರಿಸಿದರು. ಸೃಷ್ಟಿಯ ಕೋಟೆಯಲ್ಲಿ ನೀನೊಂದು ಇಟ್ಟಿಗೆ ಎಂಬ ಡಿ.ವಿ.ಜಿ.ಯವರ ಉಕ್ತಿಯನ್ನು ಉದಾಹರಿಸಿದ ಸ್ವಾಮೀಜಿಯವರು ಪ್ರತಿ ವ್ಯಕ್ತಿಯೂ ಸಮಷ್ಟಿಯಲ್ಲಿ ತಾನೊಬ್ಬ ಎಂಬ ಅರಿವಿನಿಂದ ನಡೆದುಕೊಂಡರೆ ಇಡೀ ಜೀವನದ ಕೋಟೆ ಸುಭದ್ರ. ಶಾಸ್ತ್ರದಲ್ಲಿ ಎಲ್ಲವೂ ಇರುವುದಿಲ್ಲ. ಇಲ್ಲದ ಒಳ್ಳೆಯದನ್ನು ಸೇರಿಸಿಕೊಳ್ಳಿ, ವಿರುದ್ಧವಾದುದನ್ನು ತಿದ್ದಿಕೊಳ್ಳಿ ಎಂಬ ಅಮೃತ ನುಡಿಗಳಿಂದ ಆಶೀರ್ವಚನ ನೀಡಿದರು.

ಮಧ್ಯಾಹ್ನ ಸ್ವಾಮಿ ಪುರುಷೋತ್ತಮಾನಂದಜೀಯವರು 'ಕವಿಕಂಡ ಶ್ರೀರಾಮಕೃಷ್ಣ' ಎಂಬ ಗೀತರೂಪಕ ಪ್ರವಚನವನ್ನು ನಡೆಸಿ ಕೊಟ್ಟರು. ಕನ್ನಡದ ಹೆಸರಾಂತ ಕವಿಗಳಾದ ಕುವೆಂಪು ಅವರ ರಚನೆಯೊಂದಿಗೆ ತಮ್ಮ ಸ್ವಂತ ಕವನಗಳಿಂದಲೂ ಆಯ್ದ ಕವನಗಳನ್ನು ಭಾವಪೂರ್ಣವಾಗಿ ಹಾಡಿ ತಮ್ಮ ಗಾನಮಾಧುರ್ಯದಿಂದ ಭಕ್ತ ಜನರ ಹೃದಯವನ್ನು ಪ್ರವೇಶಿಸಿ ಭಾವನಾಲೋಕಕ್ಕೆ ಕರೆದೊಯ್ದರು. ಹೀಗೆ ಶ್ರೀರಾಮಕೃಷ್ಣರಿಗೆ ಕಾವ್ಯ ಪುಷ್ಪಾಂಜಲಿಯ ಅರ್ಚನೆಯನ್ನು ಮಾಡಿದರು.

### ಆರನೆಯ ಅಧಿವೇಶನ: ಮಧ್ಯಾಹ್ನ ೪.೦೦-೫.೩೦
### ವಿಷಯ: ಶಿಕ್ಷಣ ಪದ್ಧತಿ.
### ಮೈಸೂರು ಆಶ್ರಮದ ಹಿಂದಿನ ಅಧ್ಯಕ್ಷರಾಗಿದ್ದ ಶ್ರೀಮತ್ ಸ್ವಾಮಿ ಶಾಂಭವಾನಂದಜೀಯವರ ಸ್ಮರಣಾರ್ಥ

ಮೊದಲಿಗೆ ಆನಂದಪೂರ್ಣ ಶಿಕ್ಷಣ ಎಂಬ ವಿಷಯ ಪ್ರಸ್ತಾಪಿಸಿ ಮಾತನಾಡಿದ ಶ್ರೀ ಗುರುರಾಜ್ ಕರ್ಜಗಿ ಅವರು ಗುರು-ಶಿಷ್ಯರ ನಡುವಣ ಸಂಬಂಧ ಉತ್ತಮವಾಗಿದ್ದಲ್ಲಿ ಅದು ಆನಂದದಾಯಕ. ಉತ್ತಮ ಗುರುವಿನಲ್ಲಿ ಮೂರು ಗುಣಗಳಿರಬೇಕು : ೧. ಬೋಧಿಸುವ ವಿಷಯದಲ್ಲಿ ಆಸಕ್ತಿ ೨. ವೃತ್ತಿಯ ಬಗ್ಗೆ ವಿಶ್ವಾಸ ಮತ್ತು ೩. ವಿದ್ಯಾರ್ಥಿಗಳನ್ನು ತನ್ನ ಮಕ್ಕಳಂತೆ ಭಾವಿಸುವುದು. ಈ ಗುಣಗಳಿದ್ದಲ್ಲಿ ಅಂಥವನು ಉತ್ತಮ ಅಧ್ಯಾಪಕನಾಗಬಲ್ಲ, ಎಂಬ ಅಂಶವನ್ನು ಸ್ಪಷ್ಟಪಡಿಸಿದರು.

ಸ್ವಾಮಿ ಶಾಂಭವಾನಂದಜೀ ಮತ್ತು ಶಿಕ್ಷಣ ಎಂಬ ವಿಚಾರಾತ್ಮಕ ವಿಷಯವನ್ನು ಹಲವಾರು ನಿದರ್ಶನಗಳೊಡನೆ ವಿವರಿಸಿ ಮಾತನಾಡಿದವರು ಶ್ರೀ ಬಿ.ಎಸ್. ಶ್ರೀಕಂಠಯ್ಯನವರು. ಸ್ವಾಮಿ ಶಾಂಭವಾನಂದರು ಒಬ್ಬ ವ್ಯಕ್ತಿ ಮಾತ್ರವಲ್ಲ, ಅವರು ಒಂದು ಮಹಾಶಕ್ತಿಯ ಮಾನವಸ್ವರೂಪ. ಅಲ್ಪಕಾಲದಲ್ಲಿ ಆಶ್ರಮದ ಪ್ರಾರ್ಥನಾಮಂದಿರದ ನಿರ್ಮಾಣ, ಚಿಕ್ಕ ವಿದ್ಯಾರ್ಥಿನಿಲಯವನ್ನು ಸುಸಜ್ಜಿತ ವಿದ್ಯಾಶಾಲೆಯಾಗಿ ಪರಿವರ್ತಿಸಿದ್ದು, ಶ್ರೀರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಸಂಸ್ಥೆಯ ಸಂಸ್ಥಾಪನೆ— ಇದೆಲ್ಲದರ ಹಿನ್ನೆಲೆಯಲ್ಲಿ ಅವರ ಮಹತ್ತು ಇದೆ ಎಂದು ನುಡಿದರು.

ಶಿಕ್ಷಣದಲ್ಲಿ ತಂದೆ ತಾಯಿಯರ ಪಾತ್ರದ ಕುರಿತು ಮಾತನಾಡಿದ ಶ್ರೀಮತಿ ಆರ್. ಇಂದಿರಾ ಅವರು 'ಆಧುನಿಕ ಕಾಲಗಳಲ್ಲಿ ಗುರು-ಶಿಷ್ಯ ಸಂಬಂಧ ದೂರವಾಗುತ್ತಿದೆ, ಸಾಮಾಜಿಕ-ಆರ್ಥಿಕ ಅಸಮಾನತೆ ಹೆಚ್ಚುತ್ತಿದೆ. ಇಂಥ ಪರಿಸ್ಥಿತಿಯಲ್ಲಿ ತಂದೆ ತಾಯಿಯರು ಮಕ್ಕಳ ವಿದ್ಯಾಭ್ಯಾಸದಲ್ಲಿ ಹೆಚ್ಚು ಶ್ರದ್ಧೆ ವಹಿಸಬೇಕು, ಅದು ಅಗತ್ಯ ಮಾತ್ರವಲ್ಲ ಅನಿವಾರ್ಯವೂ ಹೌದು. ಮನೆಯೇ ಮೊದಲ ಪಾಠಶಾಲೆ ಎಂಬ ನುಡಿ ಕಾರ್ಯಗತವಾಗಬೇಕು. ಕಲಿಕೆಗೆ ಅನುಕೂಲವಾದ ವಾತಾವರಣ ಕಲ್ಪಿಸುವುದು ತಂದೆ ತಾಯಿಯರ ಆದ್ಯ ಕರ್ತವ್ಯ ಎಂದು ಹೇಳಿದರು.

ನಂತರ 'ಶಿಕ್ಷಣ ಮತ್ತು ಸಮಾಜಪ್ರಜ್ಞೆ' ಎಂಬ ವಿಷಯವಾಗಿ ಮಾತನಾಡಿದವರು ಡಾ.ಸುದರ್ಶನ್ ಅವರು. 'ವಿದ್ಯಾಭ್ಯಾಸದ ಗುರಿ ವ್ಯಕ್ತಿಯ ಸರ್ವಾಂಗೀಣ ಬೆಳವಣಿಗೆಯೊಂದಿಗೆ ಸಮಷ್ಟಿಯ ಪ್ರಗತಿಯೂ ಆಗಬೇಕು ಎಂಬುದು. ಆಗ ವಿದ್ಯಾಭ್ಯಾಸದ ಗುರಿ ಸಫಲವಾಗುವುದು. ವಿದ್ಯಾಭ್ಯಾಸದ ಮೂಲ ಉದ್ದೇಶ ಅಜ್ಞಾನ

ಒಡತನ ಮೂಢನಂಬಿಕೆಗಳ ನಿವಾರಣೆ. ಸಾಮಾಜಿಕ ಪ್ರಜ್ಞೆ ಇಲ್ಲದ ಕಲೆ, ವಿಜ್ಞಾನ ವ್ಯರ್ಥ. ಮನುಷ್ಯರಿಗೆ ಒಳ್ಳೆಯದನ್ನು ಮಾಡುವ ಪ್ರಯತ್ನದಲ್ಲಿ ನರಕಕ್ಕೆ ಹೋಗಲೂ ಸಿದ್ಧ ಎಂಬ ವಿವೇಕಾನಂದರ ವಾಣಿ ನಮ್ಮನ್ನು ಜಾಗೃತಗೊಳಿಸಲಿ' ಎಂದು ಅವರು ನುಡಿದರು.

ಅಧ್ಯಕ್ಷಪೀಠವನ್ನು ಅಲಂಕರಿಸಿದ್ದ ಸ್ವಾಮಿ ಜಗದಾತ್ಮಾನಂದಜೀಯವರು ವಿದ್ಯಾಭ್ಯಾಸದ ಬಗೆಗೆ ಸ್ವಾಮಿ ವಿವೇಕಾನಂದರಿಗಿದ್ದ ಕಳಕಳಿಗೆ ನಾವು ಸ್ಪಂದಿಸಬೇಕು, ಮಹಾ ಚೇತನಗಳ ಸ್ಫೂರ್ತಿಯ ಬುಗ್ಗೆ ನಮ್ಮಲ್ಲಿ ಪುಟ್ಟ ಕಾರಂಜಿಗಳಾಗಿಯಾದರೂ ಪುಟಿದೇಳಬೇಕು. ಬಹುಕಾಲದವರೆಗೆ ಶಿಕ್ಷಣ ಶ್ರೀಮಂತರ ವಸ್ತು ಎಂಬ ಮನೋಭಾವವಿತ್ತು. ಈ ಭಾವನೆ ರೂಢಮೂಲವಾಗಿ ಕಿತ್ತುಹೋಗುವಂತಹ ಕಾರ್ಯ ವಿದ್ಯಾಕ್ಷೇತ್ರದಲ್ಲಿ ಆಗಬೇಕು. ಈ ಹಾದಿಯಲ್ಲಿ ಮುನ್ನಡೆಯಲು ಕಬ್ಬಿಣ ಕಾದಿರುವಾಗಲೇ ಅದನ್ನು ಬಡಿದು ನಿರ್ದಿಷ್ಟ ಆಕಾರಕ್ಕೆ ತರುವಂತೆ ನಮ್ಮ ಯುವ ಜನಾಂಗಕ್ಕೆ ಒಳ್ಳೆಯ ಶಿಕ್ಷಣವನ್ನು ನೀಡಬೇಕು ಎಂದು ಕರೆ ಕೊಟ್ಟರು.

ಅಂದು ಸಂಜೆ ೬.೩೦ಕ್ಕೆ ಶ್ರೀರಾಮಕೃಷ್ಣರ ಚಲನ ಚಿತ್ರ ಪ್ರದರ್ಶನವನ್ನು ಆಯೋಜಿಸಲಾಗಿತ್ತು.

## ೨೧.೦೫.೨೦೦೦ (ಭಾನುವಾರ)



**ಸ್ವಾಮಿ ಆತ್ಮವಿದಾನಂದಜೀಯವರು ಶೋಭಾಯಾತ್ರೆಯ ರಥದಲ್ಲಿದ್ದ ದಿವ್ಯತ್ರಯರಿಗೆ ಆರತಿ ಮಾಡುತ್ತಿರುವುದು.**

ಸಮ್ಮೇಳನದ ಕಡೆಯ ದಿನವಾದ ಇಂದು ಶುಭಾರಂಭಗೊಂಡಿದ್ದು ಕನ್ನಡ ನಾಡಿನ ಹತ್ತು ಹಲವು ಕಡೆಗಳಿಂದ ಬಂದು ಶ್ರೀರಾಮಕೃಷ್ಣರ ಹೆಸರಿನಲ್ಲಿ ಒಂದಾಗಿ ನೆರೆದಿದ್ದ ಭಕ್ತ ಸಮೂಹದ ಶೋಭಾಯಾತ್ರೆಯ ಮೂಲಕ. ಸುಂದರ ಬೆಳಗಿನ ಬೆಳಕಿನಲ್ಲಿ ಚೆಲುವಾಂಬ ಪಾರ್ಕಿನ ಸ್ವಾಮಿ ವಿವೇಕಾನಂದರ ಪ್ರತಿಮೆಯ ಬಳಿ ಸಮ್ಮೇಳನಕ್ಕೆ ಬಂದಿದ್ದ ಮೂರು ಸಾವಿರಕ್ಕೂ ಹೆಚ್ಚು ಭಕ್ತರು ಸ್ವಯಂಸೇವಕರು ಮತ್ತು ಸಾಧುಗಳು ನೆರೆದಿದ್ದರು. ತಮ್ಮ ತಮ್ಮ ಸಂಸ್ಥೆಗಳ ಹೆಸರಿರುವ ಮತ್ತು ದಿವ್ಯತ್ರಯರ ಧ್ಯೇಯವಾಕ್ಯಗಳಿರುವ ಬ್ಯಾನರ್‌ಗಳನ್ನು ಹಿಡಿದಿದ್ದ ಭಕ್ತವೃಂದ ಸಂಕೀರ್ತನೆಯೊಂದಿಗೆ ಆಶ್ರಮದ ಪ್ರಾಂಗಣಕ್ಕೆ ಬಂದು ದೇವಾಲಯದಲ್ಲಿ ಶ್ರೀರಾಮಕೃಷ್ಣರ ಸನ್ನಿಧಿಯಲ್ಲಿ ಸೇರಿತು. ಪ್ರಸಾದ ವಿನಿಯೋಗವಾದ ನಂತರ ಸಮ್ಮೇಳನದ ಅಂಗಣಕ್ಕೆ ಶೋಭಾಯಾತ್ರೆಯು ಮಧ್ಯದಲ್ಲಿ ಸುಂದರವಾಗಿ ಅಲಂಕರಿಸಿದ್ದ ದಿವ್ಯತ್ರಯರ ಭಾವಚಿತ್ರಗಳಿಟ್ಟಿದ್ದ ರಥವನ್ನು ಅನುಸರಿಸಿ ಮುಂದುವರೆಯಿತು. ಶೋಭಾಯಾತ್ರೆಯು ವಿದ್ಯಾಶಾಲೆಯ ಮುಂದೆ ಅಂತ್ಯಗೊಂಡಿತು. ರಥದಲ್ಲಿದ್ದ ದಿವ್ಯತ್ರಯರ ಆರತಿಯೊಂದಿಗೆ ಈ ಸುಂದರ ಕಾರ್ಯಕ್ರಮ ಮುಗಿಯಿತು.

## ಏಳನೆಯ ಅಧಿವೇಶನ: ಬೆಳಗ್ಗೆ ೮.೪೫-೧೦.೩೦
## ವಿಷಯ: ಸ್ವಾಮಿ ವಿವೇಕಾನಂದರು ಮತ್ತು ಭಾರತದ ಪುನರ್ನಿರ್ಮಾಣ




**ಎಡದಿಂದ, ಡಾ. ಬಾಲಸುಬ್ರಮಣ್ಯಂ, ಸ್ವಾಮಿ ಜಿತಕಾಮಾನಂದಜಿ, ಸ್ವಾಮಿ ಪರಮಾರ್ಥಾನಂದಜಿ ಮತ್ತು ಶ್ರೀ ಕೃಷ್ಣೇಗೌಡ**

ಸ್ವಾಮಿ ವಿವೇಕಾನಂದರು ಮತ್ತು ರಾಷ್ಟ್ರೀಯತೆಯ ಬಗ್ಗೆ ಮಾತನಾಡಿದ ಮಂಗಳೂರು ರಾಮಕೃಷ್ಣ ಮಠದ ಸ್ವಾಮಿ ಜಿತಕಾಮಾನಂದಜಿಯವರು, 'ರಾಷ್ಟ್ರೀಯತೆ ಎಂಬುದರ ಪರಿಕಲ್ಪನೆ ಸ್ವಾಮಿ ವಿವೇಕಾನಂದರ ಜೀವನವನ್ನೇ ಆಧರಿಸಿದ್ದು. ಸ್ವಾಮಿ ವಿವೇಕಾನಂದರು ರಾಷ್ಟ್ರಪುರುಷ. ಭಾರತೀಯತೆ ಎಂದರೆ ಭಾರತದ ಸಂಸ್ಕೃತಿ ಧರ್ಮಗಳ ಸಂಯೋಗವೇ ಆಗಿದೆ. ಇದನ್ನು ಸ್ವಾಮೀಜಿ ರಕ್ತಗತ ಮಾಡಿಕೊಂಡಿದ್ದರು. **"ಮಹಾನ್ ಚೇತನಗಳ ಜನ್ಮಭೂಮಿ ಭಾರತ"**— ಎಂಬ ಹೆಮ್ಮೆ ಅವರದು. ಸ್ವಾಮೀಜಿಯವರ **"ಏಳು, ಎದ್ದೇಳು, ಗುರಿ ಮುಟ್ಟುವವರೆಗೆ ನಿಲ್ಲದಿರು"** ಎಂಬ ವೀರವಾಣಿ ಪ್ರತಿಯೊಬ್ಬ ಭಾರತೀಯನ ಹೃನ್ಮಂದಿರದಲ್ಲಿ ನೆಲೆ ನಿಂತಲ್ಲಿ **ರಾಷ್ಟ್ರೀಯತಾ ಭಾವ ತಾನಾಗಿ ಮೂಡುವುದು'** ಎಂದರು.

ನಂತರ **ಸ್ವಾಮಿ ವಿವೇಕಾನಂದರು ಮತ್ತು ಜನಸಾಮಾನ್ಯರ ಉದ್ಧಾರ** ಎಂಬ ವಿಷಯ ಕುರಿತು ಮಾತನಾಡಿದ ಡಾ.ಬಾಲಸುಬ್ರಹ್ಮಣ್ಯಂ **'ಸೇವಾ ಕಾರ್ಯದಲ್ಲಿ ತೊಡಗಿದವರಲ್ಲಿ ಮನಶ್ಶುದ್ಧತೆ ತಾಳ್ಮೆ ನಿರಂತರ ಪ್ರಯತ್ನ ಅಗತ್ಯ. ಹಾಗೆಯೇ ಮೌಲ್ಯಾಧಾರಿತ ಕಾರ್ಯ ಯಾವುದೇ ಆಗಿರಲಿ, ಅದರ ಹಿನ್ನಲೆಯಾಗಿ ಆಧ್ಯಾತ್ಮಿಕತೆ ಇರಲೇಬೇಕು. ಇಂಥಾ ಕಾರ್ಯ ಮಾಡುವಾಗ ಕಷ್ಟ ಕಾರ್ಪಣ್ಯಗಳು ಅನಿವಾರ್ಯ. ಅವನ್ನೆಲ್ಲ ಎದುರಿಸಿ ನಿಂತಾಗಲೇ ಮುನ್ನಡೆಯಲು ಅದ್ಭುತ ಶಕ್ತಿ ಮೂಡುವುದು. ನೂರು ವರ್ಷಗಳ ಹಿಂದೆ ಸ್ವಾಮಿ ವಿವೇಕಾನಂದರ ಬೋಧನೆ-ಸಾಧನೆ-ಮಾರ್ಗದರ್ಶನಗಳ ಅಗತ್ಯ ಎಷ್ಟಿತ್ತೊ ಈಗ ಅವರ ಕನಸಿನ ರಾಜ್ಯವನ್ನು ನನಸಾಗಿಸಲು ಅವುಗಳ ಅಗತ್ಯ ನೂರುಪಟ್ಟು ಹೆಚ್ಚಿದೆ'** ಎಂದು ಅಭಿಪ್ರಾಯಪಟ್ಟರು.

ಮೂರನೆಯ ಭಾಷಣಕಾರರು ಶ್ರೀ ಕೃಷ್ಣೇಗೌಡರು. ಅವರು 'ಸ್ವಾಮಿ ವಿವೇಕಾನಂದರು ಬಯಸಿದ ಶಿಕ್ಷಣ ಮತ್ತು ಚಾರಿತ್ರ್ಯ ನಿರ್ಮಾಣ' ಎಂಬ ವಿಚಾರವಾಗಿ ಮಾತನಾಡಿದರು. 'ಜೀವನದಲ್ಲಿ ಗುರಿ ಸಾಧಿಸದೆ ಇರುವುದು ತಪ್ಪಲ್ಲ, ಆದರೆ ಗುರಿಯೇ ಇಲ್ಲದಿರುವುದು ತಪ್ಪು. ಮಹಾಪುರುಷರು ಆದರ್ಶ ವ್ಯಕ್ತಿಗಳಾಗಿರುತ್ತಾರೆ. ನಾವು, ಸಾಮಾನ್ಯರು ಅವರು ತೋರಿದ ಜಾಡಿನಲ್ಲಿ ನಡೆಯಬೇಕು. ಜೀವನ ಶಿಕ್ಷಣದಲ್ಲಿ ಅಧಿಕಾರ, ಹಣ ಸಂಪಾದನೆ ಗೌಣವಾಗಿದ್ದು ಜೀವನ ನೈತಿಕವಾಗಿ ಆಧ್ಯಾತ್ಮಿಕತೆಯ ಹಿನ್ನೆಲೆಯಲ್ಲಿ ಸಾಗಿದರೆ ವ್ಯಷ್ಟಿಯೊಂದಿಗೆ ಸಮಷ್ಟಿಯ ಪ್ರಗತಿಯನ್ನೂ ಸಾಧಿಸಿದಂತಾಗುತ್ತದೆ. ಸ್ವಾಮಿ ವಿವೇಕಾನಂದರು ಬಯಸಿದ ಶಿಕ್ಷಣ ಪದ್ಧತಿ ಇಂಥದ್ದು' ಎಂದು ಅವರು ನುಡಿದರು.

ಅಧ್ಯಕ್ಷ ಪೀಠದಿಂದ ಮಾತನಾಡಿದ ಸ್ವಾಮಿ ಪರಮಾರ್ಥಾನಂದಜೀಯವರು ಸ್ವಾಮಿ ವಿವೇಕಾನಂದರ ಪತಾಕೆಯನ್ನು ಹಿಡಿದು ಹಳ್ಳಿ ಹಳ್ಳಿಗಳಿಗೆ ಹೋಗಿ ಅಲ್ಲಿನ ಜನರ ಕಷ್ಟ ಸುಖಗಳಿಗೆ ಸ್ಪಂದಿಸಿ ಸೇವೆ ಮಾಡಿ ಎಂದು ಒಂದು ಹಿಂದೀ ಗೀತೆಯನ್ನು ತಾವು ಎಲ್ಲರಿಂದಲೂ ಒಂದೇ ಕಂಠದಿಂದ ಹಾಡಿಸುವದರ ಮೂಲಕ ನೆರೆದಿದ್ದ ಭಕ್ತರಿಗೆ ಕರೆ ಕೊಟ್ಟರು. ಇದರ ಉದ್ದೇಶ ಗ್ರಾಮಗಳಿಗೆ ಹೋಗಿ ಅಲ್ಲಿ ಶ್ರೀರಾಮಕೃಷ್ಣರ, ವಿವೇಕಾನಂದರ, ಶ್ರೀಮಾತೆಯವರ ಜೀವನ ಹಾಗೂ ಸಾಧನೆಗಳನ್ನು ಅಲ್ಲಿನ ಮುಗ್ಧ ಹಳ್ಳಿಗರಿಗೆ ಮನವರಿಕೆ ಮಾಡಿಕೊಡಬೇಕು. ಆ ಮೂಲಕ ಅವರಲ್ಲಿ ಜಾಗೃತಿ ಉಂಟುಮಾಡಬೇಕು ಎಂಬುದಾಗಿತ್ತು.

## ಮುಕ್ತಾಯ ಸಮಾರಂಭ

ಮುಕ್ತಾಯ ಸಮಾರಂಭದ ಮೊದಲ ಭಾಷಣ ಮಾಡಿದವರು ಸ್ವಾಮಿ ರಾಘವೇಶಾನಂದಜೀಯವರು. ಕರ್ನಾಟಕದ ರಾಮಕೃಷ್ಣ ವಿವೇಕಾನಂದ ಭಕ್ತ ಸಮುದಾಯಕ್ಕೆ ಅವರು ಕೊಟ್ಟ ಕರೆ ಈ ಕೆಳಗಿನಂತಿದೆ.:

'ನೀವು ವಾಸಿಸುವ ಸ್ಥಳಕ್ಕೆ ಸಮೀಪವಾದ ಕ್ಷೇತ್ರಗಳಲ್ಲಿ ರಾಮಕೃಷ್ಣರ ಭಾವಪ್ರಚಾರ ಕಾರ್ಯವನ್ನು ಕೈಗೊಳ್ಳಿ. ದಿವ್ಯತ್ರಯರ ಅಮೃತೋಕ್ತಿಗಳನ್ನು ತಿಳಿಯಿರಿ, ಬೇರೆಯವರಿಗೆ ತಿಳಿಸಿರಿ. ಆಗಲೇ ನೀವು ಅವುಗಳನ್ನು ತಿಳಿದಿದ್ದಕ್ಕೆ ಸಾರ್ಥಕ. ಹಾಡಿನ ಮೂಲಕ, ಸಂವಾದದ ಮೂಲಕ, ಪ್ರವಚನಗಳ ಮೂಲಕ, ರಾಮಕೃಷ್ಣ ಆಧ್ಯಾತ್ಮ ಸಂದೇಶವನ್ನು ಪ್ರಚುರಗೊಳಿಸಿ, ರಾಮಕೃಷ್ಣ ವಿವೇಕಾನಂದ ಸಾಹಿತ್ಯವನ್ನು ಜನಪ್ರಿಯಗೊಳಿಸಿ . ಮೈಸೂರು ಶ್ರೀರಾಮಕೃಷ್ಣಾಶ್ರಮದಿಂದ ಪ್ರಕಟವಾಗುತ್ತಿರುವ ಒಂದು ಸುಂದರಪತ್ರಿಕೆ 'ವಿವೇಕಪ್ರಭ'. ನಿಮ್ಮಲ್ಲಿ ಪ್ರತಿಯೊಬ್ಬರೂ ಇದಕ್ಕೆ ಹತ್ತು ಸದಸ್ಯರನ್ನಾದರೂ ಮಾಡಿಸಿದಲ್ಲಿ ಹದಿಮೂರು ಸಾವಿರ ಪ್ರತಿಗಳು ವಿತರಣೆಯಾಗುತ್ತಿರುವ ಈ ಪತ್ರಿಕೆಯ ಪ್ರಸಾರ ೩೦,೦೦೦ಕ್ಕೂ ಹೆಚ್ಚಾಗುವುದರಲ್ಲಿ ಸಂದೇಹವಿಲ್ಲ.'

ಸ್ವಾಮಿ ಪುರುಷೋತ್ತಮಾನಂದಜೀಯವರು ಸಂಘಟನೆಯ ಮಹತ್ವವನ್ನು ಕುರಿತು ತಿಳಿಯಹೇಳಿದರು. '**ಸಂಘಶಕ್ತಿ ಎಲ್ಲ ಕಾರ್ಯಗಳಿಗೂ ಮೂಲ.** ಸ್ಪಷ್ಟ ಕಲ್ಪನೆಯಿದ್ದರೆ ಸಂಘಟನಾ




ಎಡದಿಂದ, ಸ್ವಾಮಿ ಆತ್ಮವಿದಾನಂದಜಿ, ಸ್ವಾಮಿ ಪುರುಷೋತ್ತಮಾನಂದಜಿ, ಸ್ವಾಮಿ ಸುರೇಶಾನಂದಜಿ ಮತ್ತು ಸ್ವಾಮಿ ರಾಘವೇಶಾನಂದಜಿ

ಕಾರ್ಯ ಕಷ್ಟವೇನಿಲ್ಲ. ಸರಿಯಾದ ಮಾರ್ಗದರ್ಶನವಿಲ್ಲದೆ ಹುಟ್ಟಿಕೊಳ್ಳುವ ಸಂಘಟನೆ ನಾಯಿಕೊಡೆಗಳಂತೆ ಹುಟ್ಟಿ ಅಳಿದು ಹೋಗುತ್ತದೆ. ಸಮಾನ ವಯಸ್ಕರು ಒಂದೆಡೆ ಸೇರಿ ಚಿಂತನೆಗೆ ತೊಡಗಿದರೆ ಅಲ್ಲೇ ಸಂಘಟನೆಯ ಶುಭಾರಂಭ. ಉದಾರಿಯಾಗಿದ್ದರೆ ದಾರಿ ಸ್ಪಷ್ಟ. ಶ್ರೀರಾಮಕೃಷ್ಣರ ಮೇಲೆ ಭಾರಹಾಕಿ ವಿವೇಕಾನಂದರು ಅಮೇರಿಕೆಗೆ ಹೋದರು. ಧರ್ಮದ ಜಯಭೇರಿ ಹೊಡೆದರು. ಅಲ್ಪ ಪ್ರಮಾಣದಲ್ಲಾದರೂ ನಿಮ್ಮಿಂದ ಅಂಥ ಕಾರ್ಯ ಸಾಧ್ಯ' ಎಂದ ಅವರು '**ನಂಬಿ ಕೆಟ್ಟವರಿಲ್ಲ ಗುರುದೇವರನು, ನಂಬದೆ ಕೆಟ್ಟರೆ ಕೆಡಲಿ ಅಧಮಾಂಧರು. ವನಕುಸುಮದಂತೆ ಇದ್ದು ಆಧ್ಯಾತ್ಮದ ಕಂಪನ್ನು ಭಾವಪ್ರಚಾರದ ಮಾಧ್ಯಮದಿಂದ ಪ್ರಸರಿಸಿ**' ಎಂಬ ಕಳಕಳಿಯ ಮನವಿಯನ್ನು ಮಾಡಿದರು.

ಅಧ್ಯಕ್ಷ ಪೀಠದಿಂದ ಆಶೀರ್ವಚನ ನೀಡಿದ ಸ್ವಾಮಿ ಸುರೇಶಾನಂದಜಿ ಅವರು ಭಕ್ತ ಸಮ್ಮೇಳನವನ್ನು ಇಷ್ಟು ಅರ್ಥಪೂರ್ಣವಾಗಿ ವ್ಯವಸ್ಥಿತವಾಗಿ ಏರ್ಪಡಿಸಿದ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಆತ್ಮವಿದಾನಂದಜೀಯವರನ್ನು ಅಭಿನಂದಿಸಿದರು. ಮೊದಲು ನಮ್ಮನ್ನು ನಾವು ತಿದ್ದಿಕೊಳ್ಳಬೇಕು, ನಮ್ಮಲ್ಲಿ ಪರಿವರ್ತನೆಯುಂಟಾಗಬೇಕು. ಇದಿಲ್ಲದೆ ಎಷ್ಟೇ ಇತರರನ್ನು ಉದ್ಧಾರ ಮಾಡುವ ಪ್ರಯತ್ನದಿಂದಲೂ ಸಾರ್ಥಕತೆ ಉಂಟಾಗುವುದಿಲ್ಲ ಎಂಬುದನ್ನು ಕಥೆ ಉದಾಹರಣೆಗಳ ಮೂಲಕ ಅವರು ವಿವರಿಸಿದರು.

ನಂತರ ಆಶ್ರಮದ ಸಾಧುಗಳಿಂದ ಹೋಮ ಜರುಗಿತು. ಶ್ರೀರಾಮಕೃಷ್ಣರ ದಿವ್ಯನಾಮವನ್ನು ನೂರಾಎಂಟು ಬಾರಿ ನೆರೆದಿದ್ದ ಎಲ್ಲ ಭಕ್ತರೂ ಉಚ್ಚರಿಸಿ ತಾವೂ ಈ ಪವಿತ್ರ ಹೋಮದಲ್ಲಿ ಪಾಲ್ಗೊಂಡರು. ಸಮಾವೇಶಗೊಂಡಿದ್ದ ಸಾಧುಗಣದ ಸನ್ಮಾನದೊಂದಿಗೆ ಸಮಾರಂಭ ಮುಕ್ತಾಯವಾಗಿತು.

ಹೀಗೆ ಶ್ರೀರಾಮಕೃಷ್ಣ, ಶ್ರೀಮಾತೆ ಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರ ಕೃಪಾಕಟಾಕ್ಷದಿಂದ ಮೈಸೂರು ನಗರದಲ್ಲಿ ಭಕ್ತ ಸಮ್ಮೇಳನವು ವಿಜೃಂಭಣೆಯಿಂದ ನಡೆದು ಯಶಸ್ವಿಯಾಯಿತು. ಭಕ್ತರ ಹೃದಯದಲ್ಲಿ ಅಚ್ಚಳಿಯದ ಸ್ಮೃತಿಯನ್ನು ಸೃಷ್ಟಿಸಿ ಇನ್ನೊಂದು ಇಂತಹ ಸಮ್ಮೇಳನಕ್ಕಾಗಿ ಉತ್ಸುಕತೆಯಿಂದ ಕಾಯುವಂತೆ ಅವರನ್ನು ಪ್ರೇರೇಪಿಸಿತು. □